# ಪ್ರಳಯೋದಕದಲ್ಲಿ ವಟ ಪತ್ರ ಶಯನನಾಗಿದ್ದ ಕಾಲದಲ್ಲಿ – ಸುಳಾದಿ

**(ಸಂಕ್ಷಿಪ್ತ ಸೃಷ್ಟಿ ಪ್ರಕರಣ ಸುಳಾದಿ)**

1. **Ref.:** Purandara Dasara Suladigalu – Edited by Shri Pavanje Gururao, Sriman Madhwa Siddantha Granthalaya, Udupi (1927)
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru.
3. **Note:** The wordings in without highlights are as per Ref. 1 and the wordings given in yellow highlights are as per Ref. 2.
4. **Note:** The singer has mostly followed the wordings in Ref. 2. There are certain differences which are not considered here.

**ರಾಗ: ಭೈರವಿ**

**ಧ್ರುವ ತಾಳ**

| | |
|---|---|
| ಪ್ರಳಯೋದಕದಲ್ಲಿ ವಟಪತ್ರ ಶಯನನಾಗಿದ್ದ | ಪ್ರಳಯೋದಕದಲ್ಲಿ ವಟಪತ್ರ ಶಯನನಾಗಿದ್ದ |
| ಕಾಲದಲ್ಲಿ ಶ್ರೀದೇವಿಯರು | ಕಾಲದಲ್ಲಿ ಶ್ರೀದೇವಿಯರು |
| ಶ್ರೀ ಭೂ ದುರ್ಗಾ ರೂಪದಿ ನಿಂದು | ಶ್ರೀ ಭೂ ದುರ್ಗಾ ರೂಪದಿ ನಿಂದು |
| ದಕ್ಷಿಣಾಯಜ್ಞ ನಾಮದಿಂ ವೇದಗಳಿಂದ | ದಕ್ಷಿಣಾಯಜ್ಞ ನಾಮದಿಂ ವೇದಗಳಿಂದ |
| ಕೊಂಡಾಡುವ ಮುಖ್ಯಾಭಿಮಾನಿಯಾಗಿ | ಕೊಂಡಾಡುವ ಮುಖ್ಯಾಭಿಮಾನಿಯಾಗಿ |
| ವರ್ಣ ನಾಮಕರಿಂದ ನಿತ್ಯ ನಿಗಮಾರ್ಥಗಳಿಂದ | ವರ್ಣಾತ್ಮಕದಿಂದ ನಿತ್ಯ ನಿಗಮಾರ್ಥಗಳಿಂದ |
| ಸ್ತುತಿಸುವಳು ಮಿತಿಯೆಂದು ಬೊಮ್ಮನ ನೂರಾರೇಳೆಂಟು | ತುತಿಸುವಳು ಆ ಆ ಆ ತ್ರಿಪ್ರಕಾರ ಮಿತಿಯೆಂದು |
| ಭಾಗದೊಳೊಂದು ಭಾಗವಿರೆ ಲಕುಮಿ ದೇವಿ | ಬೊಮ್ಮನ ನೂರರೊಳೆಂಟು ಭಾಗದೊಳೊಂದು |
| ತಾ ಪ್ರೇರಕಳಾಗಿ ಸ್ತುತಿಸುವಂದದಿ ಪ್ರೇರಿಸಲಾಗ | ಭಾಗವೀ ಲಕುಮಿದೇವಿಗೆ ತಾ ಪ್ರೇರಿಸಲಾಗಿ ತುತಿಸುವಂದದಿ |
| ಪ್ರಾರ್ಥನೆಯನು ಮಾಡಿಸಿಕೊಂಬಲ್ಲಿ | ಪ್ರೇರಕನಾಗಿ ಪ್ರಾರ್ಥನೆ ಕೈಕೊಂಡ ತಮ ತಮ್ಮ ಸಾಧನಗಳು |
| ನಿರೂಪಿಸಿದನು ಪುರಂದರ ವಿಠಲಾ ॥ 1 ॥ | ಮಾಡಿಕೊಂಬಲ್ಲಿ ನಿರೂಪಿಸಿದನು ಪುರಂದರ ವಿಠಲ |

**ಮಟ್ಟೆ ತಾಳ**

| | |
|---|---|
| ನೂರು ವರುಷವು ಇಂದಾಯಿತೆನಲು | ನೂರು ವರುಷವು ಯಿಂದಾಯಿತೆನಲು |
| ಉದಯ ಕಾಲದಿ ಚತುರ ದಶ ಭುವನಾತ್ಮಕವಾದ | ಉದಯ ಕಾಲದಿ ಚತುರ್ದಶ ಭುವನಾತ್ಮಕವಾದ |
| ಕಮಲದಲ್ಲಿ ಚತುರಮುಖ ಬೊಮ್ಮನ ಪಡೆದಿ ನೀನೂ | ಕಮಲದಲ್ಲಿ ಚತುರ್ಮುಖ ಬೊಮ್ಮನ ಪಡದೆ ನೀನು |
| ನಮ್ಮ ಬಂದು ನಿನ್ನ ಪ್ರಳಯೋದಕವನ್ನು | ಒಮ್ಮೆ ಬಂದು ನಿನ್ನ ಪ್ರಳಯೋದಕವನು |
| ತೆರೆಗಳ ನೋಡಿ ಏನು ಕಾಣದೆ ಪೊಕ್ಕುನಾಳಾದಲ್ಲಿ | ಥೆರೆಗಳ ನೋಡಿಯೇನು ಕಾಣದೆ ಪೊಕ್ಕುನಾಳದಲ್ಲಿ |
| ಮತ್ತೊಮ್ಮೆ ಬರಲು ಘೋರವಾದ | ಮತ್ತೊಮ್ಮೆ ಬರಲು ನಿನ್ನ ಘೋರವಾದ |
| ನಿನ್ನ ರೂಪವ ಕಂಡು ಅಂಜಿ ಮತ್ತೆ | ನಿನ್ನ ರೂಪವು ಕಂಡು ಅಂಜಿ ಮತ್ತೆ |
| ನಿನ್ನ ಉದರ ಪ್ರವೇಶವಾದಾ | ನಿನ್ನ ಮನವೇನೆಂದು ಬಂದದ ಕಂಡು ಉದರ ಪ್ರವೇಶವಾದ |
| ಒಂದು ಭಯವು ಯೆರಡು ಜ್ಞಾನವು | ಒಂದು ಭಯವು ಎರಡು ಅಜ್ಞಾನವು |
| ನಿನ್ನ ವಿಷಯದಲ್ಲಿ ಉಂಟಾದಡಾಗಲಿ | ನಿನ್ನ ವಿಷಯದಲ್ಲಿ ಉಂಟಾದಡಾಗಲಿ |
| ಕಂತು ಜನಕಾ ತಪತಪ ಎನಲಾಗಿ | ಕಂತು ಜನಕ ನೀನೆ ತಪ ತಪವೆನಲಾಗ |
| ತಪವನು ಮಾಡಿದಾ ಪುರಂದರ ವಿಠಲನ್ನ | ತಪವನು ಮಾಡಿದ ಪುರಂದರ ವಿಠಲನ್ನ |
| ನೀ ವಲಿಸಿ ಸೃಷ್ಟಿಯ ಮಾಡಿದ ಅಜಭವನು ॥ 2 ॥ | ಒಲಿಸಿ ಸೃಷ್ಟಿಯ ಮಾಡಿದ ಸರಸಿಜ ಸಂಭವನು |

**ರೂಪಕ ತಾಳ**

| | |
|---|---|
| ಸೂಕ್ಷ್ಮ ರೂಪದಲ್ಲಿಪ್ಪತ್ತುನಾಲ್ಕು ತತ್ತ್ವಗಳ | ಸೂಕ್ಷ್ಮ ರೂಪವಾದ ಇಪ್ಪತ್ತುನಾಲ್ಕು ತತ್ವಗಳ |
| ಹೊರಗೆ ಪಂಚಭೂತಂಗಳಿಗಭಿಮಾನಿಯಾದ | ಹೊರಗೆ ಪಂಚಭೂತಗಳಿಗಭಿಮನಿಯಾದ |
| ಗಣೇಶ ಮೊದಲಾದ ಪಂಚಭೂತಂಗಳ ಸೃಜಿಸಿದನಾಗ | ಗಣೇಶ ಮೊದಲಾದ ಪಂಚಭೂತಗಳ ಸೃಜಿಸಿದನಾಗ |
| ಒಂದೊಂದು ವರ್ಣದಾ ಅಭಿಮಾನಿಗಳಿಂದ | ಒಂದೊಂದಾವರಣದ ಅಭಿಮಾನಿಗಳಿಂದ |
| ಮಹತ್ತತ್ವಕ್ಕೆ ಬ್ರಹ್ಮ ಅಹಂಕಾರಾಧೀಶನೆಂದು | ಮಹತ್ತತ್ವಕೀಶ–ಅಹಂಕಾರಾಧೀಶನೆಂದು |
| ಬ್ರಹ್ಮಾಂಡವಾ ನಿರ್ಮಾಣ ಮಾಡಿ | ಬೊಮ್ಮಾಂಡವ ನಿರ್ಮಾಣವ ಮಾಡಿ |
| ಪೂರ್ವದಂತೆ ದೇವತೆಗಳ ನಿರೂಪಿಸಿ | ಪೂರ್ವದಂತೆ ಆ ದೇವತೆಗಳ ಸೃಜಿಸಿ |
| ಬೊಮ್ಮಾಂಡದಿ ಆಧಾರವಾಗಿ ತನ್ನ | ಬೊಮ್ಮಂಡವಾಧಾರವಾಗಿ ತನ್ನಾ ದೇಹವ |

ದೇಹವಾ ಬೆಳೆಸಿದಾ ಚತುರಮುಖನಾಗ

ಮೂಲ ರೂಪದಿಂದ ಪುರಂದರ ವಿಠಲಾ

ವಿರಾಟದಲ್ಲಿ ವಾಸವಾಗಿ ನಿಂದಾ ಜಗದಾಧಾರಾ ॥ 3 ॥

**ಝಂಪೆ ತಾಳ**

ಬೊಮ್ಮಗೆ ಅಂದು ಅವ್ಯಾಕೃತದಲ್ಲಿ ವಿರಜೆಲಿ

ಮಾಣಗಿಸಿ ಉದರದಲ್ಲಿ ಪ್ರವೇಶ ಬೊಮ್ಮಾದಿ–

ಗಳು ಇರಲು ಕೆಲವು ಲೋಕಂಗಳನು ಸೃಷ್ಟಿಯಾದ

ಬಳಿಕಾ ಶ್ವೇತ ದ್ವೀಪದಲ್ಲಿದ್ದ ಮೂರುತಿಯ

ದರುಶನದಿ ಮುಕುತರೆನಿಸಿಕೊಂಡು ಗಣನೆಯಿಲ್ಲದ

ಅಪಾರ ರೂಪಂಗಳಲ್ಲಿ ಒಂದು ಮುಖದಿ

ಚತುರಮುಖನಿಗೆ

ಸರ್ವಾಂಗ ಸಾಯುಜ್ಯವಿತ್ತಾ ಮಂಗಳಾಂಗನು

ಪುರಂದರ ವಿಠಲಾ ಮುಕುತರೊಡೆಯನು ॥ 4 ॥

ಬೆಳಸಿದ ಚತುರ್ಮುಖನಾಗ

ಮೂಲ ರೂಪದಿಂದ ಪುರಂದರ ವಿಠಲ

ವಿರಾಟದಲ್ಲಿ ವಾಸವಾಗಿ ನಿಂದ ಜಗದಾಧಾರ

ಹಳೆಯ ಬೊಮ್ಮಗೆ ಅಂದು ಅವ್ಯಾಕೃತದಲ್ಲಿ

ವಿರಜೆಯಲಿ ಮುಳಿಗಿಸಿ ಉದುರದಲಿ ಪ್ರವೇಶ

ಬೊಮ್ಮಾದಿಗಳು ಇರಲು ಕೆಲವು ಲೋಕಂಗಳು

ಸೃಷ್ಟಿಯಾದ

ಬಳಿಕ ಶ್ವೇತ ದೀಪದಲ್ಲಿದ್ದ ಮೂರುತಿಯ

ದರುಶನದಿ ಮುಕುತರೆನಿಸಿಕೊಂಡು

ಐದಿದರು ಪುರಂದರ ವಿಠಲನ ಚರಣ ಕಮಲವ

**ತ್ರಿವಿಡೆತಾಳ**

ಗಣನೆ ಇಲ್ಲದ ಅಪಾರ ರೂಪಂಗಳಲ್ಲಿ

ಒಂದು ರೂಪದಿ ಚತುರ್ಮುಖನಿಗೆ

ಸರ್ವಾಂಗ ಸಾಯುಜ್ಯವಿತ್ತ

ಮಂಗಳಾಂಗನು ಸಾಯುಜ್ಯವಿತ್ತ

ಪುರಂದರ ವಿಠಲ ಭಕುತರೊಡೆಯ ನೀನು

ಭಕುತರಧಿಪ ನೀನು ಸಾಯುಜ್ಯವಿತ್ತ ॥ 5 ॥

**ಅಟ ತಾಳ**

| | |
|---|---|
| ಶ್ವೇತ ದ್ವೀಪವಾ ಸುತ್ತಿದ ಉದಕವು | ಶ್ವೇತ ದ್ವೀಪವು ಸುತ್ತಿದ ಉದಕವು |
| ಬೈಲಾದ ಮೇಲೆ ಅಂಧಂತಮಸ್ಸು | ಬಯಲಾದ ಮೇಲೆ ಅಂಧಂ ತಮಸು |
| ಏಳು ಕೋಟಿ ಪರಿಮಿತಿಯಾದ ನರಕವು | ಏಳುಕೋಟಿ ಪರಿಮಿತವಾದ ನರಕವು |
| ಶುಕ್ಲ ಶೋಣಿತ ಮಿಶ್ರ ಅಗಾಧದಿಂದ | ಶುಕ್ಲ ಶೋಣಿತ ಮೂತ್ರ ಅಶುದ್ಧದಿಂದ |
| ಮಿಶ್ರವಾದ ತಮಸ್ಸಿನೊಳು ಪೂರ್ಣ ಸಾಧನವನು | ಮಿಶ್ರವಾದ ತಮಸಿನೊಳು ಪೂರ್ಣ ಸಾಧನವನು |
| ಮಾಡಿದ ಜನರಿಗೆ ಹರಿದ್ವೇಷ ಭಕ್ತರಲ್ಲಿ | ಮಾಡಿದ ಜನರಿಗೆ ಹರಿದ್ವೇಷ ಭಕ್ತರಲ್ಲಿ |
| ಅನಾದಿಕಾಲದಿ ದುಃಖ ಭಾಜನರಾದ | ಅನಾದಿ ಕಾಲದಿ ಮಾಡಿ ದುಃಖ ಭಾಜನರಾದ |
| ಪಾಪಿ ಜೀವರನು ವಾಯು ಭೃತ್ಯರಿಂದ ಪ್ರೇರಿಸಿ | ಪಾಪಿ ಜೀವರನು ವಾಯು ಭೃತ್ಯರಿಂದ ಪ್ರೇರಿಸಲಾಗಿ |
| ಗದೆಯಲ್ಲಿ ಲಿಂಗ ಶರೀರವಾ ಹೋಳು ಮಾಡಿ | ಲಿಂಗ ಶರೀರವ ಹೋಳು ಮಾಡಿ |
| ಕೆಡಹಿ ಅಂಧಂತಮಸ್ಸಿನೊಳು | ಕೆಡಹಿತು ಅಂಧಂ ತಮಸಿನೊಳು |
| ಕ್ರಿಮಿ ಪಕ್ಷಿಗಳಿಂದ ಬಾಧೆಯಲ್ಲದೆ | ಕ್ರಿಮಿ ಪಕ್ಷಿಗಳಿಂದ ಬಾಧೆಯಲ್ಲದೆ ಮೇಲೆ |
| ಪರ್ವತಗಳ ತಂದು ಬಿಸಾಡುವ | ಪರ್ವತಂಗಳ ತಂದು ಬಿಸುಡುವರು |
| ಭೀಮನ ದೂತರಿಂದ ನೊಂದು | ಭೀಮನ ದೂತರಿಂದ ನೊಂದು |
| ದುಃಖ ಭಾಜನರಾದ ಪಾಪಿ ಜೀವರಿಗೆ | ದುಃಖ ಭಾಜನರಾದ ಪಾಪಿ ಜೀವರಿಗೆ |
| ಎಂತು ಮಾಡಿದರೆ ಅಂಥಾ ಫಲವೀವಾ | ಎಂತು ಮಾಡಿದರೆ ಅದರಂತೆ ಫಲವೀವ |
| ಕಂತು ಜನಕ ಪುರಂದರ ವಿಠಲಾ ॥ 6 ॥ | ಕಂತು ಜನಕ ಪುರಂದರ ವಿಠಲರೇಯ |

**ಆದಿ ತಾಳ (ಏಕ ತಾಳ)**

| | |
|---|---|
| ಇಂತ ಪ್ರಾಕೃತಿ ಸಾಧನವಾದ | ಇಂತು ಪ್ರಕೃತಿ ಸಂಬಂಧವಾದಡೆ |
| ಬೊಮ್ಮ ರುದ್ರ ಇಂದ್ರ ದಿಕ್ಪಾಲಕರು ಮತ್ತೆ | ಬೊಮ್ಮ ರುದ್ರ ಇಂದ್ರ ದಿಕ್ಪಾಲಕರು ಮತ್ತೆ |
| ದೇವತೆಗಳು ಮನು ಮುನಿಗಳು ಶ– | ದೇವತೆಗಳು ಮನು ಮುನಿಗಳು |
| ರೀರಗಳಲ್ಲಿ ವಾಸವಾಗಿ ಪುರಂದರ ವಿಠಲಾ | ಶರೀರದಲ್ಲಿ ವಾಸವಾಗಿ ಪುರಂದರ ವಿಠಲ |
| ಸೃಷ್ಟಿ ಸ್ಥಿತಿ ಲಯ ಕಾರಣ ॥ 7 ॥ | ಸೃಷ್ಟಿ ಸ್ಥಿತಿ ಲಯಕೆ ಕಾರಣ |

**ಜತೆ**

ಕರ್ಮ ಜಡಂಗಳು ಮರ್ಮವ ತಿಳಿದು ಫಲವೀವಾ ಕರ್ಮಜಾಂಡಗಳ ಮರ್ಮಗಳ ತಿಳಿದು ಫಲವೀವ

ನಿರ್ಮಲ ಸ್ವತಂತ್ರ ಪುರಂದರ ವಿಠಲಾ ॥ 8 ॥ ನಿರ್ಮಲ ಚರಿತ್ರ ಪುರಂದರ ವಿಠಲ

**Classification:** Suladi
**Name of Suladi:** sankshipta srushTi prakaraNa suLAdi
**Ankita:** purandara vittala
**Location:** NA
**Category:** praLaya kAla, Vishnu stuti
**Sub-Category:** Vishnu, karma, Nirmala, Bhumi, devi, veda, brahma, Lakshmi, padma, vaikunta, Krishna, tapa, bhima, dukha, papa, jiva, pakshi, shiva, muni, tatva, ganesha, loka, bhaya, viraja, naraka, parvata
**Pravachana:** NA
**Explanation:** NA